

ಬಂದಿತ್ತು. ಅದಾದ ನಂತರ ಇಂಥ ಸಂದರ್ಭಗಳಲ್ಲೆಲ್ಲಾ ಶಿವು ಜಾಗೃತನಾಗುತ್ತಿದ್ದ. ಆಫೀಸಿನ ಕಟ್ಟಡದ ಗೇಟಿನ ಎರಡೂ ಬದಿಗೆ ದೊಡ್ಡದಾದ ಕನ್ನಡ ಬಾವುಟ ಕಟ್ಟುವುದು, ರಾಜಕುಮಾರ್ ಫೋಟೊ ಇಡುವುದು ಮಾಡುತ್ತಿದ್ದ. ಯಾರಾದರೂ, 'ಏನ್ ಶಿವು, ಏನೂ ತೊಂದ್ರೆ ಇಲ್ಲಾ ತಾನೇ?' ಎಂದು ಕೇಳಿದರೆ 'ಯಾವನೂ ಬರಾಂಗಿಲ್ಲಾ ಸಾರ್. ಆ ಥರಾ ಅರೆಂಜ್ಮೆಂಟ್ ಮಾಡೀದೀನಿ. ಬಂದ್ರೋರು ಅಣ್ಣಾವ್ರ ಫೋಟೊ ನೋಡಿ ಕೈಮುಗಿದು ಹೋಗಬೇಕು. ಅಂಥಾ ಫೋಟೊ ಇಟ್ಟಿದೀನಿ ಈ ಸಲ' ಅಂತಾ ಹೆಮ್ಮೆಯಿಂದ ಹೇಳುತ್ತಿದ್ದ.

ಅಷ್ಟೇ ಅಲ್ಲ. ಸಮಾಧಿ ಶಿವು ಒಂಥರಾ ಕಂಪನಿಯ ಸಾಂಸ್ಕೃತಿಕ ರಾಯಭಾರಿ ಕೂಡಾ. ಯಾವುದಾದರೂ ಹಬ್ಬ ಹರಿದಿನಗಳಲ್ಲಿ ಕಡ್ಡಾಯವಾಗಿ ಜುಬ್ಬಾ ಧರಿಸಿ ಹಣೆಗೆ ಕುಂಕುಮವಿಟ್ಟುಕೊಂಡು ಬರುತ್ತಿದ್ದ. ಆಗಸ್ಟ್ ಹದಿನೈದಕ್ಕೆ ಬಣ್ಣದ ಬಲೂನು ಕಟ್ಟುವುದು, ಆಯುಧ ಪೂಜೆಗೆ ಮಂಟಪ ಸಿದ್ಧಗೊಳಿಸುವಿಕೆಗೆಲ್ಲಾ ಆತನದೇ ಮೇಲ್ವಿಚಾರಣೆ. ಬೂದುಗುಂಬಳ ಒಡೆಯುವ ಮುನ್ನ, ಆತ ಎಲ್ಲರನ್ನೂ ದೂರ ಸರಿಸುವ ಆಂಗಿಕ ಭಂಗಿ ಹಾಗೂ ಮುಖ ಭಾವ, 'ಕುಂಬಳದಲ್ಲಿ ಕುಂಕುಮವಿದೆ; ಒಡೆದಾಗ ಸಿಡಿದು ಮೈಗೆ ತಾಗುತ್ತದೆ' ಎಂಬ ಸತ್ಯ ತನಗೊಬ್ಬನಿಗೇ ಗೊತ್ತಿದೆ ಎನ್ನುವಂತಿರುತ್ತಿತ್ತು. ಆತ ತಿರುಪತಿಗೋ ಧರ್ಮಸ್ಥಳಕ್ಕೋ ಹೋಗಿ ಬಂದರೆ ಇಡೀ ಆಫೀಸಿಗೇ ಗೊತ್ತಾಗುತ್ತಿತ್ತು. ದೊಡ್ಡ ತಾಟಿನಲ್ಲಿ ವಿವಿಧ ಬಗೆಯ ಪ್ರಸಾದಗಳನ್ನಿಟ್ಟು ಎಲ್ಲರಿಗೂ ಹಂಚುತ್ತಿದ್ದ. ಎಲ್ಲ ಟೇಬಲ್ಲುಗಳಿಗೂ ಹೋಗಿ ತುಸುವೇ ಬಾಗಿ ಪ್ರಸಾದದ ತಟ್ಟೆಯನ್ನು ಮುಂದೊಡುವಾಗ ಗಂಭೀರವದನನಾಗಿರುತ್ತಿದ್ದ. 'ಇದು ಸೀರಿಯಸ್ ವಿಷಯ. ಟೇಬಲ್ಲಿನ ಮೇಲೆ ಚಾ ತಂದು ಇಟ್ಟಂತಲ್ಲ' ಎಂದು ಪರೋಕ್ಷವಾಗಿ ಹೇಳಿದಂತಿರುತ್ತಿತ್ತು. ಆಫೀಸಿನ ಅನೇಕರು ಎಲ್ಲಿ ಪಾರ್ಟಿ ಕೊಡಬೇಕಾಗುತ್ತೋ ಎಂದು ತಮ್ಮ ಹುಟ್ಟಿದ ದಿನವನ್ನು ಗೌಪ್ಯವಾಗಿಡುತ್ತಿದ್ದರೆ, ಈತ ಮಾತ್ರ 'ಇವತ್ತು ನನ್ನ ಬರ್ತ್‌ಡೇ ಸಾರ್' ಅನ್ನುತ್ತ ಎಲ್ಲರಿಗೂ ಒಂದೊಂದು ಡೈರಿ ಮಿಲ್ಕ್ ಚಾಕಲೇಟು ಹಂಚುತ್ತಿದ್ದ.

ಇನ್ನು ಜಯಕೃಷ್ಣ ಅಲಿಯಾಸ ಜೇಕೆ ಸರ್ ಯಶೋಗಾಥೆಯೇ ಇನ್ನೊಂದು ಕತೆಯಾದೀತು. ಯಾವುದೋ ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಜನರಲ್ ಮ್ಯಾನೇಜರಾಗಿ ಕೆಲಸಮಾಡುತ್ತಿದ್ದ ಅವರು ತಮ್ಮದೇ ಸ್ವಂತ ಡೆವಲಪ್‌ಮೆಂಟ್ ಕಂಪನಿ ಶುರುಮಾಡಿ, ಹತ್ತೇ ವರ್ಷಗಳ ಅವಧಿಯಲ್ಲಿ ಅದನ್ನು ಮುನ್ನೂರು ಕೋಟಿ ವಹಿವಾಟಿನ ಸಂಸ್ಥೆಯನ್ನಾಗಿ ಬೆಳೆಸಿದ್ದು ಸಾಮಾನ್ಯ ಸಂಗತಿಯೇನಲ್ಲ. ಹಗಲಿರುಳೆನ್ನದೆ ದುಡಿಯುವ ಪರಿಶ್ರಮ, ವ್ಯವಹಾರ ಜಾಣ್ಮೆಯ ಜೊತೆ ತನ್ನ ಜನರನ್ನು ಪ್ರೀತಿಯಿಂದ ಕಾಣುತ್ತಾರೆ ಎನ್ನುವ ಖ್ಯಾತಿಯೂ ಅವರಿಗಿದೆ. ಸಣ್ಣವರು ದೊಡ್ಡವರು ಎನ್ನುವ ಭೇದಭಾವವಿಲ್ಲ ಎಂಬುದು ಅವರ ನಡೆನುಡಿಯಲ್ಲಿ ಗೋಚರಿಸುತ್ತದೆ. ಯಾವುದೋ ಕೆಲಸಕ್ಕೆಂದು ಶಿವುವನ್ನು ತನ್ನ ಕಾರಿನಲ್ಲಿ ಕರೆದುಕೊಂಡು ಹೋದವರು, ಅಲ್ಲಿಂದಲೇ ಬೇರೆಡೆ ಹೋಗಬೇಕಾಗಿ ಬಂದಾಗ, ಶಿವುವನ್ನು ವಾಪಸ್ಸು ತಮ್ಮ ಕಾರಿನಲ್ಲೇ ಆಫೀಸಿಗೆ ಕಳಿಸಿಕೊಡಲೂ ಅವರು ಹಿಂದೆ ಮುಂದೆ ನೋಡುವವರಲ್ಲ. 'ನನ್ನ ಯಶಸ್ಸಿನ ಕ್ರೆಡಿಟ್ ಎಲ್ಲವೂ ನನ್ನ ಎಂಪ್ಲಾಯಿಗಳಿಗೇ ಸೇರುತ್ತದೆ' ಎಂದು ಅವರು ಹಲವುಬಾರಿ ಮೀಟಿಂಗುಗಳಲ್ಲಿ ಎಲ್ಲರೆದುರೇ ಹೇಳಿದ್ದಾರೆ. ಹೀಗಾಗಿಯೇ ಅವರು ಸಾಕಷ್ಟು ಕಂಪನಿನಿಷ್ಠರನ್ನು ಹುಟ್ಟುಹಾಕಿದ್ದಾರೆ. ಅವರ ಕಂಪನಿಯಲ್ಲಿ ಅನೇಕ ಹಳೆಯ ಉದ್ಯೋಗಿಗಳು ಹಾಗೆಯೇ ಉಳಿದುಕೊಂಡಿದ್ದಾರೆ.

ಅದರಲ್ಲೂ ಶಿವರಾಜನ ಸ್ವಾಮಿನಿಷ್ಠೆಯ ಬಗ್ಗೆ ಮಾತನಾಡುವ ಹಾಗೇ ಇಲ್ಲ ಬಿಡಿ. ಜೇಕೆ ಕಂಪನಿಯ ಆರಂಭದ ದಿನಗಳವು. ಅವರು ಹೊಸೂರು ರಸ್ತೆಯಲ್ಲಿ ಮೂರು ಎಕರೆ ಜಮೀನು ತೆಗೆದುಕೊಂಡಿದ್ದರು. ಅಲ್ಲಿ ಅಪಾರ್ಟ್‌ಮೆಂಟಿನ ಕೆಲಸ ಶುರುಮಾಡಬೇಕೆಂದು ಜಾಗವನ್ನು ಸ್ವಚ್ಛಗೊಳಿಸುವಾಗ ಮೂಲೆಯಲ್ಲಿ ಐದಾರು ಸಮಾಧಿಗಳು ಇದ್ದುದು ಕಂಡುಬಂದಿತ್ತು. ಕೆಲಸ ನಿಂತಿತ್ತು. ಸಮಾಧಿಗಳ